

ಹಿಂದಿನ ದಿನ ಸಂಜೆಯೇ ಬಂದು ನೀರಿಗೆ ಸಮೀಪದ ಈ ನಿರ್ಜನ ಪ್ರದೇಶದಲ್ಲಿ ಟೆಂಟು ಕಟ್ಟಿಕೊಂಡಿದ್ದೆವು. ಅವು ಸಹಜವಾಗಿ ಬರಬಹುದಾದ ಮೂರು ನಾಲ್ಕು ಜಾಗೆಗಳನ್ನು ನ್ಯಾಚುರಲಿಸ್ಟ್ ರಾಜು ಗುರುತಿಸಿದ್ದ. ಅದರಲ್ಲಿ ಸೂರ್ಯ ಮೂಡಿ ಮೊದಲ ಕಿರಣಗಳು ನೀರು ಹಾಗೂ ಈ ಹಕ್ಕಿಗಳ ಮೇಲೆ ಬೀಳುವ ಪಕ್ಕಾ ಸ್ಥಳವನ್ನು ಖಾತ್ರಿ ಮಾಡಿ ಬೆಳಕಿರುವಾಗಲೇ ಠಿಕಾಣಿ ಹೂಡಿದ್ದೆವು. ರಾತ್ರಿ ಗಾಢವಾದಂತೆ ಕಗ್ಗತ್ತಲು ಹಬ್ಬಿ, ಭಯವೂ ಹೆಚ್ಚಾಯಿತು. ಮರೆತ ಎಲ್ಲಾ ದೆವ್ವ–ಭೂತದ ಕಥೆಗಳು ಆಗ ಥಳಕ್ಕೆಂದು ನೆನಪಾದವು. ಎಷ್ಟೇ ಕಾಡಿ ಬೇಡಿದರೂ ಅವು ನಮ್ಮ ಮನಸ್ಸನ್ನು ಬಿಟ್ಟು ಹೋಗಲು ನಿರಾಕರಿಸಿ ಸೈತಾನರಾಗಿ ಕಾಡತೊಡಗಿದವು. ಒಂದು ಹುಲ್ಲುಕಡ್ಡಿ ಅಲುಗಿದ ಸಣ್ಣ ಶಬ್ದವೂ ಹಾವೋ, ಚಿರತೆಯೋ, ಮತ್ಯಾರೋ ಬಂದಂತೆ ದಿಗಿಲನ್ನು ಹೆಚ್ಚಿಸಿದ್ದವು. ನಿಜವಾಗಿ ನಾವೆಷ್ಟು ಪುಕ್ಕಲರು ಎಂಬುದಾಗಲಿ, ನಮ್ಮ ತಲೆಯೊಳಗೆ ಭಯದ ಸಾವಿರ ಸಂಗತಿಗಳು ಹೇಗೆ ಹೆಡೆ ಎತ್ತದೆ ಸುಪ್ತವಾಗಿ ಬಚ್ಚಿಟ್ಟುಕೊಂಡಿರುತ್ತವೆ ಎಂಬ ಸತ್ಯವಾಗಲಿ ಅರ್ಥ ಮಾಡಿಸುವ ನೈಜಗುರುಗಳೆಂದರೆ ಕಗ್ಗತ್ತಲು, ನಿರ್ಜನ ಪ್ರದೇಶ ಮತ್ತು ಒಂಟಿತನ.

ಅಸಲಿಗೆ ನಾವೆಲ್ಲಾ ಪುಕ್ಕಲರೇ ಆದರೂ ಪರಸ್ಪರ ಒಬ್ಬರಿಗೊಬ್ಬರು ಸುಳ್ಳು ಧೈರ್ಯ ಹೇಳಿಕೊಂಡು ಬೆಳಗಾಗುವುದನ್ನೇ ಎದುರು ನೋಡಿದೆವು. ಸೂರ್ಯ ಮೂಡುವ ಮೊದಲೇ ನೀರಿಗೆ ಬರುವ ಈ ಹಕ್ಕಿಗಳ ಸಮೀಪದಿಂದ ಚಿತ್ರಿಸುವ ಮಹದಾಸೆ ತುಂಬಿಕೊಂಡಿದ್ದೆವು. ಹಕ್ಕಿಗಳು ಬರುವ ಮೊದಲೇ ನಾವು ಅಲ್ಲಾಡದಂತೆ ನೆಲದ ಮೇಲೆ ಮಲಗಿಬಿಟ್ಟರೆ ಅವಕ್ಕೆ ತಿಳಿಯುವುದಿಲ್ಲ. ಜೊತೆಗೆ ತಮ್ಮನ್ನು ಗಮನಿಸುವವರು ಯಾರೂ ಇಲ್ಲ ಎಂದು ನಿಕ್ಕಿಯಾದಾಗ ಪಕ್ಷಿಗಳು ಹೆಚ್ಚು ಸಹಜವಾಗಿ ಆರಾಮಾಗಿ ಇರುತ್ತವೆ ಎಂಬುದು ಫೋಟೋಗ್ರಫಿ ಕಲಿಸಿದ ಅನುಭವದ ಮಾತು.

ಸಾಮಾನ್ಯವಾಗಿ ದೂರದ ಪ್ರದೇಶಗಳಿಂದ ವಲಸೆ ಬರುವ ಪಕ್ಷಿಗಳ ನಡವಳಿಕೆ ತುಂಬಾ ಸೂಕ್ಷ್ಮವಾಗಿರುತ್ತದೆ. ಒಂದು ಸಣ್ಣ ಸಪ್ಪಳವಾದರೂ, ಅಪರಿಚಿತರ ತಲೆ ಕಂಡರೂ ಸಾಕು ಪುಸಕ್ಕೆಂದು ಹಾರಿಹೋಗುತ್ತವೆ. ಅಸಲಿಗೆ ಹೊಸ ಜಾಗಗಳೇ ಹೀಗೆ.